ಸಿ.ಸಿ ನಂಃ 174/2018

ಪಿ ಡಬ್ಲುಃ 01

ಸಿ ಡಬ್ಲುಃ01

ಸಾಕ್ಷಿಯನ್ನು ದಿನಾಂಕಃ **04.08.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃಶ್ರೀ ಎಂ.ಬಿ.ವಾಯ್ ಆರೋಪಿತರ ಪರ ವಕೀಲರಿಂದಃ**

ನಾನು ಬಿ.ಕಾಂ ಪದವೀಧರ. ಪಿರ್ಯಾದಿಯನ್ನು ನಾನು ಹೇಳಿದ ಹಾಗೆ ಪೋಲಿಸರು ಬರೆದುಕೊಂಡರು. ಪೋಲಿಸರು ಪಿರ್ಯಾದಿಯನ್ನು ಬರೆದುಕೊಂಡ ನಂತರ ನಾನು ಅದನ್ನು ಓದಿ ನೋಡಿರುವುದಿಲ್ಲ, ಆದ ಕಾರಣ ಪೋಲಿಸರು ಪಿರ್ಯಾದಿಯಲ್ಲಿ ಏನು ಬರೆದುಕೊಂಡಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಘಟನಾ ಸ್ಥಳದ ಹಿಂದೆ ಮತ್ತು ಮುಂದೆ ನೇರ ರಸ್ತೆ ಇದೆ ಎಂದರೆ ಸರಿ. ಆದ ಕಾರಣ ಎದುರುಗಡೆಯಿಂದ ಬರುವ ವಾಹನ ನಮಗೆ ನೇರವಾಗಿ ಕಾಣುತ್ತದೆ ಎಂದರೆ ಸರಿ. ಘಟನಾ ಸ್ಥಳದಅಕ್ಕಪಕ್ಕ ಪೇಟ್ರೋಲ್ ಬಂಕ್ ಮತ್ತು ಪಾನ ಶಾಪ್ ಇದೆ ಎಂದರೆ , ಪಾನ ಶಾಪ್ ಇದೆ ಎಂದು ನುಡಿಯುತ್ತಾರೆ. ಆದ ಕಾರಣ ಸಾಮಾನ್ಯವಾಗಿ ಜನರೂ ಅಲ್ಲಿ ಇರುತ್ತಾರೆ ಎಂದರೆ ಸರಿ. ಅಲ್ಲಿ ಜನದಟ್ಟನೆ ಇರುವುದರಿಂದ, ಸಾಮಾನ್ಯವಾಗಿ ವಾಹನಗಳು ನಿಧಾನ ಗತಿಯಲ್ಲಿ ಬರುತ್ತವೆ ಎಂದರೆ ಹೌದು . ಆರೋಪಿಯ ವಾಹನದ ಸಂಖ್ಯೆ ನನಗೆ ನೆನಪಿಲ್ಲ. ಪಂಚನಾಮೆಯನ್ನು ಯಾರು ಬರೆದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ನಿಖರವಾಗಿ ಮಾಹಿತಿ ಇಲ್ಲ. ಪಂಚನಾಮೆಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಘಟನಾ ಸ್ಥಳದ ನಕ್ಷೆಯ ಬಗ್ಗೆ ಪೋಲಿಸರಿಗೆ ನಾನು ಮಾಹಿತಿಯನ್ನು ನೀಡಿರುವುದಿಲ್ಲ. ಅಪಘಾತವಾಗುವ ಸಮಯದಲ್ಲಿ 7.00 7.30 ಗಂಟೆ ಆಗಿತ್ತು. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಚಾಸಾ 4 ರವರ ಮುಖಕ್ಕೆ ಮತ್ತು ಕೈ ಕಾಲುಗಳಿಗೆ ಭಾರಿ ಗಾಯಗಳಾಗಿತ್ತು ಎಂದು ಹೇಳಿದ್ದು , ಅದು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ದ್ವಿಚಕ್ರ ವಾಹನ ಸ್ಕಿಡ್ ಆಗಿ ಬಿದ್ದರೆ ಈ ರೀತಿ ಗಾಯಗಳಾಗುವ ಸಂಭವವಿರುತ್ತದೆ ಎಂದರೆ ಸರಿಯಲ್ಲ. ನಮ್ಮ ವಾಹನ ಸ್ಕಿಡ್ ಆಗಿ ನಾವು ಬಿದ್ದಿದ್ದು ನಮಗೆ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಪರಿಹಾರವನ್ನು ಪಡೆದುಕೊಳ್ಳುವ ಸಲುವಾಗಿ ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿ ಸದರಿ ದಿನದಂದು ವಾಹನವನ್ನು ಚಾಲನೆ ಮಾಡದೇ ಇದ್ದರೂ ಸಹಿತ ಪರಿಹಾರವನ್ನು ಕೇಳುವ ಸಲುವಾಗಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಎ.ಪಿ.ಪಿ ಯವರಿಂದಃ**

ನಾನು ಈ ಹಿಂದೆ ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ತೋರಿಸಿದ ಘಟನಾ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿದ್ದು , ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದು ಹೇಳಿದ್ದು , ಈ ದಿನ ನಾನು ಪೋಲಿಸ್ ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದು ಹೇಳಿದ್ದು , ಈ ಎರಡರಲ್ಲಿ ಯಾವುದು ಸರಿ ಎಂದರೆ , ಸಾಕ್ಷಿಯು ನಾನು ಈ ದಿನ ಹೇಳಿದ್ದು ಸರಿ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಚಾಸಾ 4 ರವರು ರಾಜಿ ಮಾಡಿಕೊಂಡ ಕಾರಣ , ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 174/2018

ಸಿ ಡಬ್ಲುಃ 04

ಪಿ ಡಬ್ಲುಃ 05

| | |
|---|---|
| ಸಾಕ್ಷಿದಾರರ ಹೆಸರು | ಕಾರ್ತಿಕ ಸ್ವಾದಿ |
| ತಂದೆಯ ಹೆಸರು | ಸೋಮಶೇಖರ |
| ವಯಸ್ಸು | 28 |
| ಉದ್ಯೋಗ | ಖಾಸಗಿ ಕೆಲಸ |
| ವಾಸ್ತವ್ಯ | ಅಯೋಧ್ಯನಗರ , 4 ನೇ ಕ್ರಾಸ್ ಹುಬ್ಬಳ್ಳಿ |

ಸಾಕ್ಷಿಯನ್ನು ದಿನಾಂಕ **04.08.2025** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ಸುಮಾರು 6-7 ವರ್ಷಗಳ ಹಿಂದೆ ಮುಂಡಗೋಡ ಹತ್ತಿರನನಗೆ ಅಪಘಾತವಾಗಿದ್ದು , ನನಗೆ ದಿನಾಂಕ ನಿಖರವಾಗಿ ನೆನಪಿಲ್ಲ. ನಾನು ದ್ವಿಚಕ್ರ ವಾಹನದ ಮೇಲೆ ಬರುತ್ತಿದ್ದೆ, ಏನಾಯಿತು ಎಂದು ನನಗೆ ಗೊತ್ತಿಲ್ಲ. ನಾನು ಕಣ್ಣು ಬಿಟ್ಟಾಗ , ಕೆ.ಎಂ.ಸಿ ಆಸ್ಪತ್ರೆಯಲ್ಲಿದ್ದೆ. ಯಾರು ಅಪಘಾತಪಡಿಸಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನಾನು ಯಾರ ಸಮಕ್ಷಮ ಯಾವ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲುಃ ಎ ಪಿ ಪಿ ಯವರಿಂದಃ**

ದಿನಾಂಕಃ 25.01.2018 ರಂದು ನಾನು ಮತ್ತು ಚಾಸಾ 1 ರವರು ಶಿರಸಿಯ ಮಾರಿಕಾಂಬಾ ದೇವಸ್ಥಾನಕ್ಕೆ ಹೋಗಿದ್ದು , ಶಿರಸಿಯಿಂದ ಮರಳಿ ಬರುತ್ತಿರುವಾಗ , ನಾನೇ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದೆ ಎಂದರೆ ಸರಿ. ಮುಂಡಗೋಡ ಪಟ್ಟಣದ ಚೌಡಳ್ಳಿ ಊರಿಗೆ ಹೋಗುವ ಕ್ರಾಸ್ ಹತ್ತಿರ ತಲುಪಿದಾಗ , ಒಬ್ಬ ಮೋಟಾರ್ ಸೈಕಲ್ ಸವಾರ ಅತಿವೇಗ ಮತ್ತು ಅಜಾಗ್ರಕತೆಯಿಂದ ಚಲಾಯಿಸಿಕೊಂಡು ಬಂದು ನಮಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ , ಅವಾಗ ನನಗೆ ಪ್ರಜ್ಞೆ ಇರಲಿಲ್ಲ ಎಂದು ನುಡಿಯಿಯುತ್ತಾರೆ. ಅಪಘಾತವಾದ ಕಾರಣ ಚಾಸಾ 1 ರವರ ಎಡಗಾಲಿಗೆ ಮತ್ತು ನನ್ನ ಮುಖದ ಭಾಗಕ್ಕೆ ಹಾಗೂ ಕೈ ಕಾಲುಗಳಿಗೆ ಗಾಯ ನೋವುಯಾಗಿತ್ತು ಎಂದರೆ , ಸಾಕ್ಷಿಯು ನನಗೆ ಆಸ್ಪತ್ರೆಗೆ ಹೋದ ಮೇಲೆ ಪ್ರಜ್ಞೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಅಪಘಾತಪಡಿಸಿದವನ ಹೆಸರು ನಾನು ಕೇಳಿದ್ದು , ಅವನು ತನ್ನ ಹೆಸರು ಸುನೀಲ ರಮೇಶ ಜಾದವ ಎಂದು ತಿಳಿಸಿದ್ದು , ಸದರಿಯವನಿಗೂ ಸಹ ತಲೆಯ ಭಾಗಕ್ಕೆ ಮತ್ತು ಕಿವಿಗೆ ಭಾರಿ ಗಾಯವಾಗಿತ್ತು ಎಂದರೆ ಸರಿಯಲ್ಲ. ಸದರಿ ಸುನೀಲನ ಹಿಂಬದಿ ಸವಾರ್ ರಾಮು ಜಾದವ ಇವರಿಗೂ ಸಹ ಕಣ್ಣಿನ ಹತ್ತಿರ ಮತ್ತು ಎರಡು ಕಾಲುಗಳಿಗೆ ಗಾಯನೋವು ಆಗಿದ್ದು , ನಮ್ಮೆಲ್ಲರನ್ನೂ ತುರ್ತು ಚಿಕಿತ್ಸೆ ವಾಹನದಲ್ಲಿ ಮುಂಡಗೋಡ ಸರ್ಕಾರಿ ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನೊಬ್ಬನೇ ಚಿಕಿತ್ಸೆಯನ್ನು ಪಡೆದುಕೊಂಡಿದ್ದು

, ಉಳಿದವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಕೀಮ್ಸ ಆಸ್ಪತ್ರೆಗೆ ಕಳುಹಿಸಿರುತ್ತಾರೆ ಎಂದರೆ , ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅತಿವೇಗ ಮತ್ತು ಅಜಾಗ್ರುಕತೆಯಿಂದ ಬಂದ ವಾಹನವನ್ನು ಚಲಾಯಿಸಿಕೊಂಡು ಬಂದು ಅಪಘಾಪಡಿಸಿದ ಸುನೀಲ್ ರಮೇಶ ಜಾದವ ಅವರ ವಿರುದ್ಧ ಸೂಕ್ತ ಕ್ರಮವನ್ನು ಜರುಗಿಸುವಂತೆ ನಾನು ಹೇಳಿಕೆಯನ್ನು ದಿನಾಂಕಃ 22.03.2018 ರಂದು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಕಲಂ 160 ರಡಿಯಲ್ಲಿ ನೀಡಿದ ತನ್ನ ಹೇಳಿಕೆಯ ಭಾಗವನ್ನು ನಾವು ಮುಂಡಗೋಡ ಪಟ್ಟಣ _________ ಮನೆಗೆ ಬಂದಿರುತ್ತೇನೆ ಅದನ್ನು **ನಿಪಿ.5** ಎಂದು ಗುರುತಿಸಲಾಯಿತು. ಸದರಿ ದಿನದಂದು ಅಪಘಾತಪಡಿಸಿದ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಇದ್ದಾನೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿ ಅಪಘಾತಪಡಿಸಿದ್ದರೂ ಸಹಿತ ನಾವು ರಾಜಿ ಮಾಡಿಕೊಂಡ ಕಾರಣ , ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರು ವಿಚಾರಣೆಃ ಇಲ್ಲಾ.**

ಓ ಹೆ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**